
ಇದೇನೂ ರೈಲ್ವೆ ತತ್ಕಾಲ್ ರಿಸರ್ವೇಷನ್ನೂ ಅಲ್ಲ. ಎಷ್ಟೂ ಬೇಕಾದ್ರೂ ಕೊಡ್ತಾರೆ" ಎಂದು ಹೇಳಿ, ಮತ್ತೊಮ್ಮೆ ಸಮಾಧಾನ ಮಾಡಿಕೊಂಡೆ. ಆತನಿಗೆ ನನ್ನ ತರ್ಕದ ತಲೆ ಬುಡ ಅರ್ಥವಾಯಿತೋ ಇಲ್ಲವೋ ಗೊತ್ತಾಗಲಿಲ್ಲ.

ಇಷ್ಟೆಲ್ಲಾ ನಡೆಯುವ ವೇಳೆಗೆ, ಸೂರ್ಯ ಮೂಡಿದ್ದ. ಶಾಲಾ ಕಟ್ಟಡಗಳ ನೆರಳಿನ ಕೆಳಗೆ ಇನ್ನೂ ತಂಪು, ತಂಪು. ಎಳೆ ಬಿಸಿಲು ಬಂದಿದ್ದು ನೋಡಿ, ಸೊಳ್ಳೆಗಳು ತಮ್ಮ ನೈಟ್ ಡ್ಯೂಟಿ ಮುಗಿಸಿದವು. ಕೆರತಕ್ಕೆ ಮಾತ್ರವಲ್ಲದೇ, ಕೈ ಕಟ್ಟಲೂ ಕೈ ಬಳಸಲು ಅನುಕೂಲವಾಯಿತು.

ಮಹಾಭಾರತದಲ್ಲಿ ಭೀಷ್ಮರಿಗೆ ಸೇನಾಪತಿ ಪಟ್ಟ ಕಟ್ಟಿದಾಗ, ಕಟುವಾಗಿ ಆಕ್ಷೇಪಿಸುವ ಕರ್ಣನಿಗೆ ಸೇನಾಧಿಪತಿ ಭೀಷ್ಮರ ಬಾಯಿಂದ ಪಂಪ 'ಹೇಳಿಸಿದ್ದು ಸೂಳ್ಪಡೆಯಲಪ್ಪು ಕಾಣಾ ಮಹಾಜಿರಂಗದೊಳ್' (ಸರತಿಯಲ್ಲಿ ನೀನೂ ಇದ್ದೀಯಾ. ನಿನ್ನ ಪಾಳಿಯೂ ಬಂದೇ ಬರುತ್ತದೆ') ಎಂದು ಹೇಳಿದ್ದು ಯಾವ ಸರತಿಯ ಕುರಿತು -ಸೇನಾಪತ್ಯದ್ದಾ, ಸಾವಿನದಾ ಎಂಬ ಜಿಜ್ಞಾಸೆಯಲ್ಲಿ ತೊಡಗಿದವನನ್ನು, ಎಲ್ಲಿಂದಲೋ ತೂರಿ ಬಂದ ಮೈಕಿನ ಗೊರ ಗೊರ ಸದ್ದು, ಮತ್ತೆ ಶಾಲಾ ಆವರಣಕ್ಕೇ ಕರೆ ತಂದಿತು. ಶಾಲೆಯ ಮೂಲೆಯೊಂದರಲ್ಲಿ ನಿಂತಿದ್ದ ಎರಡು ಹಳದಿ ಬಸ್ಸುಗಳಿಗೆ ಜೀವ ಬಂದದ್ದು, ಆವರಣದ ತುಕ್ಕು ಹಿಡಿದ ಕಬ್ಬಿಣದ ಗೇಟಿನ ಸಶಬ್ದ ಓಡಾಟ ಎಲ್ಲ ಚಟುವಟಿಕೆಗಳೂ ಶಾಲೆಯ ಆರಂಭವನ್ನು ಸೂಚಿಸಲಾರಂಭಿಸಿದವು. ನಮ್ಮ ಸಾಲಿನಲ್ಲೂ ಚಟುವಟಿಕೆ ಮೊದಲಾಯಿತು. ಯಾರೋ ಬಾಚಣಿಕೆ ತೆಗೆದರು, ಮತ್ಯಾರೋ ಶರ್ಟು ಸರಿ ಮಾಡಿಕೊಂಡರು, ಇನ್ಯಾರೋ ಪೇಪರುಗಳನ್ನೆಲ್ಲಾ ಮಡಿಸಿಟ್ಟರು. ಮಗದೊಬ್ಬರು, ಮತ್ತೇನೋ ಮಾಡಲಾರಂಭಿಸಿದರು. ಮಹಿಳಾ ಮಣಿಯರಂತೂ, ಅಲಂಕಾರ ಸರಿ ಮಾಡಿಕೊಳ್ಳಲು, ಮೊಬೈಲ್ ಬ್ಯೂಟಿ ಪಾರ್ಲರುಗಳನ್ನೇ ತೆಗೆದರು. ಹಳಸಲು ಅಂಗಿ- ಪಂಚೆ ಹಾಕಿಕೊಂಡವರ ಬದಲಿಗೆ ಗರಿ ಗರಿ ಬಟ್ಟೆಯುಟ್ಟವರು ಬಂದರು.



ಬರೀ ಒಂದು ಹಾಳೆಯ ಅರ್ಜಿ ಇಸಕೊಂಡು ಬರಲು ಇಷ್ಟೆಲ್ಲಾ ಅಲಂಕಾರ ಬೇಕಾ... ಎಂದು ಕೇಳಿಕೊಂಡು, ಅಂಥದೇನೂ ಅಗತ್ಯವಿಲ್ಲ ಎಂಬ ತೀರ್ಪನ್ನು ಮನಸ್ಸಿನಲ್ಲಿಯೇ ಕೊಟ್ಟುಕೊಂಡು ಸಮಾಧಾನ ಮಾಡಿಕೊಂಡೆ.

ಅರ್ಜಿ ಕೊಡಲಾರಂಭಿಸಿದಕ್ಕೆ ಸಾಕ್ಷ್ಯವೆಂಬಂತೆ ಸಾಲು ಮುಂದೆ ಮುಂದೆ ಹೋಗಲಾರಂಭಿಸಿತು.. ಹಳದಿ ಲೈನಿಗೆ ಸರಿಯಾಗಿ ಜನರನ್ನು ನಿಲ್ಲಿಸಲಾಗಿತ್ತು. ಅಲ್ಲಿಂದ ಮೊದಲು ಅರ್ಜಿ ಪಡೆದ ಕೆಲವರು, ಅಲ್ಲಿಯೇ ಅರ್ಜಿ ತುಂಬಲು ಯತ್ನಿಸಿದರು. ಮತ್ತೆ ಕೆಲವರು ಮತ್ಯಾರಿಗೋ ಫೋನು ಮಾಡಿ ಅಂಗಲಾಚುವ ಕಾರ್ಯವನ್ನು ಸಾರ್ವಜನಿಕವಾಗಿಯೇ ಉದ್ಘಾಟಿಸಿಬಿಟ್ಟರು. ಹಿಂದಿನ ಸಾಲಿನ ಹುಡುಗರಾಗಿದ್ದ ನಾವು, ಮುಂದೆ ಮುಂದೆ ಸಾಗಿದೆವು. ನಿರ್ದಿಷ್ಟವಾದ ಸ್ಥಳವೊಂದರಲ್ಲಿ ಹಳದಿ ಲೈನನ್ನು ಎಳೆಯಲಾಗಿತ್ತು. ಅಲ್ಲಿ ಎಲ್ಲ ಸ್ತಬ್ಧ. ಅಲ್ಲಿ ಸೇರಿದವರನ್ನು ಹತ್ತು ಜನರ ಗುಂಪಿನಲ್ಲಿ ಕಿಟಕಿ ಬಳಿ ಕಳುಹಿಸುತ್ತಿದ್ದರು. ಅಂತೂ ಗುಂಡಿಗೆ ಗುಂಡಿಗೆಯೊಡ್ಡಿ ನಿಲ್ಲುವ ಕಾಲ ಬಂದೇ ಬಿಟ್ಟಿತು. ಈ ಹತ್ತು ಜನ ಮತ್ತೆ ಅಲ್ಲಿ ಸರತಿಯಲ್ಲಿ ನಿಂತು, ಹೆಸರು ಹೇಳಿ ಅರ್ಜಿ ಪಡೆಯಬೇಕು. ಆದರೆ, 'ಯಾರ ಹೆಸರು' ಎಂಬುದು ಗೊತ್ತಾಗಲಿಲ್ಲ. ಮಗಳ ಹೆಸರೇ ಹೇಳಿ, ಪಡೆದ. ರಾತ್ರೋ ರಾತ್ರಿಯಿಂದ ನೆರೆದಿದ್ದ ನೆರವಿಯೂ ಸೇರಿದಂತೆ ಎಲ್ಲರೂ ಒಂದೇ ಗಂಟೆಯಲ್ಲಿ ಆ ಒಂದು ಹಾಳೆಯ ಅರ್ಜಿಯನ್ನು ಪಡೆದುಕೊಂಡು ಜಾಗ ಖಾಲಿ ಮಾಡಿದ್ದು ಮಾತ್ರ, ವ್ಯವಸ್ಥೆಯ ವಿಪರ್ಯಾಸ. ಅಂದಹಾಗೇ, ಆ ಶಾಲೆಗೆ ಮಗಳನ್ನು ಸೇರಿಸಲಿಲ್ಲ. ಅರ್ಜಿಯನ್ನೇ ಗೌರವಯುತವಾಗಿ ವಿತರಿಸುವುದನ್ನು ಕಲಿಯದ ಜನ, ಗೌರವಯುತವಾಗಿ ಬದುಕುವುದನ್ನು ಮಕ್ಕಳಿಗೆ ಹೇಳಿಕೊಡುತ್ತಾರಾ ಎಂಬುದು ನನ್ನ ಪ್ರಶ್ನೆ. ಮನೆಯಲ್ಲಿ ಕದನ ವಿರಾಮದ ಶಾಂತಿ ಒಪ್ಪಂದ ಮುರಿದು ಬಿತ್ತು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೇ!

●